**APRIL 06, 2026**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಕೃತಕ ಬುದ್ಧಿಮತ್ತೆಯ, ಡಿಜಿಟಲ್ ಸ್ಮಾರ್ಟ್ ಟ್ಯೂಟರ್;** ಶಾಲಾ ಶಿಕ್ಷಣ ಇಲಾಖೆ ಹಾಗೂ ಧಾರವಾಡ ಐ.ಐ.ಟಿ. ಯಿಂದ, ಶೀಘ್ರ ಪ್ರಾಯೋಗಿಕ ಅನುಷ್ಠಾನ.
- **'ಸಾಧನಾ ಸಪ್ತಾಹ';** ವಿಕಸಿತ ಭಾರತ ಪರಿಕಲ್ಪನೆಯ, ಹಲವು ಉಪಕ್ರಮಗಳಿಗೆ ವೇದಿಕೆ – ಕೇಂದ್ರ ಸಚಿವ, ಡಾ.ಜಿತೇಂದ್ರ ಸಿಂಗ್.
- **'ಭಾರತ ಸಮುದ್ರಯಾನ; ಪ್ರಗತಿಯ ಸಬಲೀಕರಣ'** ಧ್ಯೇಯದ, 63ನೇ ರಾಷ್ಟ್ರೀಯ ಸಮುದ್ರಯಾನ ದಿನಾಚರಣೆ, ಸಂಪನ್ನ.
- **ಹಾವೇರಿ ವಿಶ್ವವಿದ್ಯಾಲಯದ,** ಮೊದಲ ಘಟಿಕೋತ್ಸವ, ಇಂದು.

<><><>

**ಈಗ ವಾರ್ತೆಗಳ ವಿವರ**

<><><>

**ಕೃತಕ ಬುದ್ಧಿಮತ್ತೆ ಆಧಾರಿತ,** ಡಿಜಿಟಲ್ ಸ್ಮಾರ್ಟ್ ಟ್ಯೂಟರ್ ಪ್ರಕಲ್ಪಕ್ಕೆ, ಮುಖ್ಯಮಂತ್ರಿ ಹಾಗೂ ಹಣಕಾಸು ಖಾತೆ ಸಚಿವ ಸಿದ್ದರಾಮಯ್ಯ, ಪ್ರಸಕ್ತ ಆಯವ್ಯಯದಲ್ಲಿ, 5 ಕೋಟಿ ರೂಪಾಯಿ, ಮೀಸಲಿರಿಸಿದ್ದಾರೆ. 'ಡಿಜಿಟಲ್ ಟ್ಯೂಟರ್' ಎ.ಐ. ತಂತ್ರಜ್ಞಾನ ಆಧಾರಿತ, ಸಕ್ಷಮ ಕಲಿಕಾ ಕ್ರಮ. ರಾಜ್ಯ ಶಾಲಾ ಶಿಕ್ಷಣ ಇಲಾಖೆ ಹಾಗೂ ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆ, ಐ.ಐ.ಟಿ., ಜಂಟಿಯಾಗಿ, ಡಿಜಿಟಲ್ ಟ್ಯೂಟರ್ ಉಪಕ್ರಮವನ್ನು, ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಯ, 20 ಶಾಲೆಗಳಲ್ಲಿ, ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು, ಯೋಜಿಸಿವೆ.

<><><>

ಈ ಕುರಿತು, ಒಂದು ವರದಿ..

<><><>

*ಧಾರವಾಡದ, ಭಾರತೀಯ ತಂತ್ರಜ್ಞಾನ ಸಂಸ್ಥೆಯ, ಇಲೆಕ್ಟ್ರಾನಿಕ್ಸ್ ಆಂಡ್ ಕಮ್ಯುನಿಕೇಷನ್ಸ್ ಇಂಜಿನಿಯರಿಂಗ್ ವಿಭಾಗದ, ಪ್ರಾಧ್ಯಾಪಕ ರಾಜಶೇಖರ ಭಟ್, ಕೃತಕ ಬುದ್ಧಿಮತ್ತೆ ಆಧಾರಿತ, ಡಿಜಿಟಲ್ ಟ್ಯೂಟರ್ ಯೋಜನೆ ಕುರಿತು ಮಾಹಿತಿ ನೀಡಿ, "ಈಗಾಗಲೇ ಸಂಬಂಧಿತ ಪಠ್ಯಗಳ ಕ್ರೋಢಿಕರಣ ಹಾಗೂ ಮೌಲ್ಯಮಾಪನ ಕೈಗೊಳ್ಳಲಾಗಿದೆ. ಡಿಜಿಟಲ್ ಟ್ಯೂಟರ್ ವಿದ್ಯಾರ್ಥಿಗಳೊಂದಿಗೆ, ದ್ವಿಮುಖ ಸಂವಹನ ಸಾಧಿಸಲಿದ್ದು, ದೃಶ್ಯ ಮತ್ತು ಶ್ರಾವ್ಯ ಸಂಯೋಜಿತ, ಸಂಭಾ ಷಣಾತ್ಮಕ ಪ್ರಸ್ತುತಿ ಹೊಂದಿರಲಿದೆ. ಡಿಜಿಟಲ್ ಟ್ಯೂಟರ್ ಶಿಕ್ಷಕರ ಮೇಲಿನ ಒತ್ತಡ ಕಡಿಮೆ ಮಾಡಿ, ಶೈಕ್ಷಣಿಕ ಚಟುವಟಿಕೆಗಳ ಗುಣಮಟ್ಟ ಹಾಗೂ ಮೌಲ್ಯವರ್ಧನೆಗೆ ಸಹಕಾರಿಯಾಗಲಿದೆ. ಪೋ ಷಕರು ತಮ್ಮ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ತಿಳಿಯಬಹುದಾಗಿದೆ" ಎಂದಿದ್ದಾರೆ.*

<><><>

**ವಿವೇಕ ಧ್ವನಿ (42) ಸೆಕೆಂದುಗಳು**

<><><>

**ರಾಜ್ಯ ಶಾಲಾ ಶಿಕ್ಷಣ ಇಲಾಖೆಯ,** ಮಹತ್ವಾಕಾಂಕ್ಷೆಯ, ಕೃತಕ ಬುದ್ಧಿಮತ್ತೆ ಆಧಾರಿತ, ಡಿಜಿಟಲ್ ಸ್ಮಾರ್ಟ್ ಟ್ಯೂಟರ್ ಯೋಜನೆ, ರಾಜ್ಯದ 8 ರಿಂದ 12ನೇ ತರಗತಿ ವರೆಗಿನ, 12 ಲಕ್ಷದ 28 ಸಾವಿರ ವಿದ್ಯಾರ್ಥಿಗಳ, ಕಲಿಕಾ ಗುಣಮಟ್ಟ ಹಾಗೂ ಶಿಕ್ಷಕರ ಬೋಧನಾ ಮೌಲ್ಯ ವರ್ಧಿಸಲಿದೆ.

<><><>

**ಶಾಲಾ ಶಿಕ್ಷಣ ಇಲಾಖೆಯ, ಬೆಳಗಾವಿ ವಲಯದ,** ಅಪರ ಆಯುಕ್ತ ಈಶ್ವರ ಉಳ್ಳಾಗಡ್ಡಿ, ಆಕಾಶವಾಣಿಗೆ ಯೋಜನೆ ಕುರಿತು ಮಾಹಿತಿ ನೀಡಿ, ಸ್ವಯಂ ಕಲಿಕಾ ಡಿಜಿಟಲ್ ಟ್ಯೂಟರ್ ಯೋಜನೆ, ತಮ್ಮ ವ್ಯಾಪ್ತಿಯಲ್ಲಿ ಶೀಘ್ರ ಪ್ರಾಯೋಗಿಕವಾಗಿ ಅನುಷ್ಠಾನಗೊಳ್ಳಲಿದೆ, ಎಂದು ತಿಳಿಸಿದ್ದಾರೆ.

<><><>

**ಅಪರ ಆಯುಕ್ತ ಈಶ್ವರ ಉಳ್ಳಾಗಡ್ಡಿ ಧ್ವನಿ (57) ಸೆಕೆಂದುಗಳು**

<><><>

**ಧಾರವಾಡದ, ಭಾರತೀಯ ತಂತ್ರಜ್ಞಾನ ಸಂಸ್ಥೆ,** ಐ.ಐ.ಟಿ. ನಿರ್ದೇಶಕ, ಪ್ರೊಫೆಸರ್ ವೆಂಕಪ್ಪಯ್ಯ ದೇಸಾಯಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿ, ಡಿಜಿಟಲ್ ಟ್ಯೂಟರ್, ಸ್ವಯಂ ಕಲಿಕಾ ಯೋಜನೆ, ಪ್ರಾಯೋಗಿಕ ಹಂತದ ಫಲಿತಾಂಶ ಆಧರಿಸಿ, ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಬಹುದಾಗಿದೆ ಎಂದು, ಹೇಳಿದ್ದಾರೆ.

<><><>

**ಐಐಟಿ ನಿರ್ದೇಶಕ ಪ್ರೊ. ವೆಂಕಪ್ಪಯ್ಯ ಆರ್. ದೇಸಾಯಿ ಧ್ವನಿ (44) ಸೆಕೆಂದುಗಳು**

<><><>

**ಭಾರತ ಜನ ಗಣತಿ 2027**: ಕಲಬುರಗಿ ವಿಭಾಗದ ಎಲ್ಲ ಜಿಲ್ಲೆಗಳ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು, ಪ್ರಾದೇಶಿಕ ಆಯುಕ್ತರ ಕಾರ್ಯಾಲಯದ, ಕೋಣೆ ಸಂಖ್ಯೆ 17ರಲ್ಲಿ, ಜನ ಗಣತಿಯ ಮಾಹಿತಿ ಮತ್ತು ಸಲಹಾ ಕೇಂದ್ರ ಸ್ಥಾಪಿಸಲಾಗಿದೆ. ದೂರವಾಣಿ ಸಂಖ್ಯೆ

08472–200 255ಕ್ಕೆ ಕರೆ ಮಾಡಿ, ಮಾಹಿತಿ ಪಡೆಯಬಹುದು ಎಂದು, ಕಲಬುರಗಿ ಪ್ರಾದೇಶಿಕ ಆಯುಕ್ತರಾದ, ಜಹೀರಾ ನಸ್ಲೀಂ ತಿಳಿಸಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**'ಸಾಧನಾ ಸಪ್ತಾಹ'**, ಅಭಿವೃದ್ಧಿ ಆಧಾರಿತ, ವಿಕಸಿತ ಭಾರತದ ಪರಿಕಲ್ಪನೆಯ, ಹಲವು ಉಪಕ್ರಮಗಳಿಗೆ ವೇದಿಕೆಯಾಗಿದೆ ಎಂದು, ಕೇಂದ್ರ ವಿಜ್ಞಾನ ಹಾಗೂ ತಂತ್ರಜ್ಞಾನ ಖಾತೆ ಸಚಿವ, ಡಾಕ್ಟರ್ ಜಿತೇಂದ್ರ ಸಿಂಗ್, ತಿಳಿಸಿದ್ದಾರೆ. ಹೊಸ ದಿಲ್ಲಿಯಲ್ಲಿ, ಪ್ರಮುಖ ಉಪಕ್ರಮಗಳಿಗೆ, ಕೇಂದ್ರ ಸಚಿವರು ಚಾಲನೆ ನೀಡಿದರು. ಬಳಿಕ ಮಾತನಾಡಿ, ವಿಜ್ಞಾನ, ತಂತ್ರಜ್ಞಾನ, ನವೋದ್ಯಮ, ಕೃಷಿ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ, ಹೊಸ ಆವಿಷ್ಕಾರಗಳನ್ನು, ಸಾಧನಾ ಸಪ್ತಾಹ ಉತ್ತೇಜಿಸುತ್ತದೆ. ಭಾರತ, ಪ್ರಗತಿಯ ಹೊಸ ಮಾದರಿಯನ್ನು, ಜಗತ್ತಿಗೆ ಪರಿಚಯಿಸಿದೆ, ಎಂದರು. ವಿಜ್ಞಾನಿಗಳ ಆಡಳಿತಾತ್ಮಕ ಸಾಮರ್ಥ್ಯ ವೃದ್ಧಿ, ಉನ್ನತಿ ಪೋರ್ಟಲ್ ಮತ್ತು ಕರ್ಮಯೋಗಿ ಕರ್ತವ್ಯ, ಮುಂತಾದ ರಾಷ್ಟ್ರೀಯ ಯೋಜನೆಗಳು, ಸಾಧನಾ ಸಪ್ತಾಹದಲ್ಲಿ ಸೇರಿವೆ.

<><><>

**'ಭಾರತ ಸಮುದ್ರಯಾನ; ಪ್ರಗತಿಯ ಸಬಲೀಕರಣ'** ಎಂಬ ಧ್ಯೇಯದೊಂದಿಗೆ, 63ನೇ ರಾಷ್ಟ್ರೀಯ ಸಮುದ್ರಯಾನ ದಿನವನ್ನು, ಉತ್ತರಕನ್ನಡ ಜಿಲ್ಲೆಯ ಕಾರವಾರದಲ್ಲಿ ಆಚರಿಸಲಾಯಿತು. ರಾಜ್ಯ ಸಮುದ್ರಯಾನ ಮಂಡಳಿ ಸಿ.ಇ.ಓ. ಊ.ಅ.ಬಾಲಚಂದ್ರ, ಕಾರ್ಯಕ್ರಮಕ್ಕೆ ಚಾಲನೆ ನೀಡಿ, 1919ರ ಏಪ್ರಿಲ್ 5ರಂದು, ಭಾರತದ ಮೊದಲ ಹಡಗು ಎಸ್.ಎಸ್.ಲಾಯಲ್ಟಿ ಮುಂಬೈ ನಿಂದ ಲಂಡನ್‌ಗೆ ಪ್ರಯಾಣಿಸುವ ಮೂಲಕ, ಭಾರತದ ಕಡಲಯಾನದ ಇತಿಹಾಸ ಆರಂಭವಾಯಿತು ಎಂದರು. ದೇಶದ ಆರ್ಥಿಕ ಪ್ರಗತಿಯಲ್ಲಿ, ನಾವಿಕರ ಸೇವೆ ಹಾಗೂ ಪರಿಶ್ರಮವನ್ನು ಗುರುತಿಸುವುದು, ಮತ್ತು ವಿಶ್ವ ಮಟ್ಟದಲ್ಲಿ, ಭಾರತದ ಕಡಲ ವ್ಯಾಪಾರ ಶಕ್ತಿಯನ್ನು ಪ್ರದರ್ಶಿಸುವುದು, ಈ ದಿನಾಚರಣೆಯ ಉದ್ದೇಶ ಎಂದರು.

<><><>

**ಹಾವೇರಿ ವಿಶ್ವವಿದ್ಯಾಲಯದ,** ಮೊದಲ ಘಟಿಕೋತ್ಸವ, ಇಂದು ಬೆಳಗ್ಗೆ 11 ಗಂಟೆಗೆ, ಗುದ್ಲೆಪ್ಪ ಹಳ್ಳಿಕೇರಿ ಕಾಲೇಜು ಸಭಾಂಗಣದಲ್ಲಿ, ಜರುಗಲಿದೆ. ಹುಕ್ಕೇರಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಹಾಗೂ ಸಾಹಿತಿ ಸತೀಶ ಕುಲಕರ್ಣಿ ಅವರಿಗೆ, ಕುಲಾಧಿಪತಿ ಥಾವರಚಂದ ಗೆಹ್ಲೋಟ ಗೌರವ ಡಾಕ್ಟರೇಟ್ ಪ್ರದಾನಿಸಲಿದ್ದಾರೆ.

<><><>

**ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ,** ಸಾಮಾಜಿಕ ಕ್ಷೇತ್ರದಲ್ಲಿ, ಸೇವಾ ನಿರತ ತಾವು, ಘೋಷಿತ ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲ ಎಂದು, ಫೇಸ್‌ಬುಕ್‌ನಲ್ಲಿ ಸ್ಪಷ್ಟ ಪಡಿಸಿದ್ದಾರೆ.

<><><>

**ಎಂಟು ವಿದ್ಯಾರ್ಥಿಗಳಿಗೆ ಚಿನ್ನದ ಪದಕ** ಹಾಗೂ ಹತ್ತು ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಲಾಗುತ್ತಿದೆ. ಸಮ ಕುಲಾಧಿಪತಿ, ಸಚಿವ ಎಂ.ಸಿ. ಸುಧಾಕರ, ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷ ಅಶೋಕ ಹಿಂಚಿಗೇರಿ ಅತಿಥಿಗಳಾಗಿ, ಪಾಲ್ಗೊಳ್ಳಲಿದ್ದಾರೆ ಎಂದು, ಉಪ ಕುಲಪತಿ ಸುರೇಶ ಜಂಗಮಶೆಟ್ಟಿ ತಿಳಿಸಿದ್ದಾರೆ.

<><><>

**ವಿಜಯಪುರ ಜಿಲ್ಲೆ, ಸುಕ್ಷೇತ್ರ ಲಚ್ಯಾಣದಲ್ಲಿ** ಆಯೋಜಿತ, ಶ್ರೀ ಶಂಕರಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ, ತಾತ್ಕಾಲಿಕ ರೈಲು ನಿಲುಗಡೆಗೆ ಅನುಮತಿ ನೀಡಿ, ಆದೇಶಿಸಲಾಗಿದೆ ಎಂದು, ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಮಾಹಿತಿ ನೀಡಿ, ಏಪ್ರಿಲ್ 12ರ ವರೆಗೆ, ಮೈಸೂರು–ಬಾಗಲಕೋಟೆ, ಮೈಸೂರು ಬಸವ ಎಕ್ಸ್‌ಪ್ರೆಸ್ ಹಾಗೂ ಮೈಸೂರು–ಪಂಢರಾಪುರ– ಮೈಸೂರು ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆಗೆ, ಭಕ್ತಾದಿಗಳ ಅನುಕೂಲಕ್ಕಾಗಿ, ಅವಕಾಶ ಕಲ್ಪಿಸಲಾಗಿದೆ ಎಂದಿದ್ದಾರೆ.

<><><>

**ಕೊಡಗು ಜಿಲ್ಲೆ, ತಡಿಯಂಡಮೊಳ್ ಬೆಟ್ಟದಲ್ಲಿ**ಚಾರಣಕ್ಕೆ ತೆರಳಿ, ಕಳೆದ ನಾಲ್ಕು ದಿನಗಳಿಂದ ನಾಪತ್ತೆಯಾಗಿದ್ದ, ಶರಣ್ಯಾ ಪತ್ತೆಯಾಗಿದ್ದಾರೆ. ಕೇರಳದ 36 ವರ್ಷದ, ಶರಣ್ಯಾ, ಥರ್ಮಲ್ ಡ್ರೋನ್ ಕ್ಯಾಮೆರಾದಲ್ಲಿ, ತಡಿಯಂಡ ಮೊಳ್ ಬೆಟ್ಟದ ಪಕ್ಕದ, ಮತ್ತೊಂದು ಶಿಖರ ಶ್ರೇಣಿಯಲ್ಲಿ ದಾಖಲಾಗಿ, ಕಾಡು ಪ್ರದೇಶವನ್ನು ನಿಖರವಾಗಿ ಬಲ್ಲ ಸ್ಥಳೀಯ, ಕುಡಿಯ ಜನಾಂಗದ ಯುವಕರ ಮೂಲಕ, ಪತ್ತೆಯಾಗಿದ್ದಾರೆ. ಕಾಡಿನಲ್ಲಿ ದಾರಿ ತಪ್ಪಿ, ವಾಪಸ್ ಬರಲು ಸಾಧ್ಯವಾಗಲಿಲ್ಲ ಎಂದು, ಶರಣ್ಯಾ ತಿಳಿಸಿದರು. ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಶೋಧಕಾರ್ಯ ಕೈಗೊಂಡ ತಂಡಗಳನ್ನು ಅಭಿನಂದಿಸಿದರು.

<><><>

**ರಾಜ್ಯ ಸಂಗೀತ ನೃತ್ಯ ಅಕಾದೆಮಿಯ,** ಪ್ರಸಕ್ತ ಸಾಲಿನ, ಶಿಷ್ಯವೇತನಕ್ಕೆ ಆಯ್ಕೆಯಾದ, ಉದಯೋನ್ಮುಖ ನೂರು ಕಲಾವಿದರಿಂದ, 'ಸಂಗೀತ ನೃತ್ಯ ಪ್ರತಿಭೋತ್ಸವ', ಬೆಂಗಳೂರಿನ, ಕನ್ನಡ ಭವನದ ನಯನ ಸಭಾಂಗಣದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಆಯೋಜಿತವಾಗಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಕೃತಕ ಬುದ್ಧಿಮತ್ತೆಯ, ಡಿಜಿಟಲ್ ಸ್ಮಾರ್ಟ್ ಟ್ಯೂಟರ್;** ಶಾಲಾ ಶಿಕ್ಷಣ ಇಲಾಖೆ ಹಾಗೂ ಧಾರವಾಡ ಐ.ಐ.ಟಿ. ಯಿಂದ, ಶೀಘ್ರ ಪ್ರಾಯೋಗಿಕ ಅನುಷ್ಠಾನ.
- **'ಸಾಧನಾ ಸಪ್ತಾಹ';** ವಿಕಸಿತ ಭಾರತ ಪರಿಕಲ್ಪನೆಯ, ಹಲವು ಉಪಕ್ರಮಗಳಿಗೆ ವೇದಿಕೆ – ಕೇಂದ್ರ ಸಚಿವ, ಡಾ.ಜಿತೇಂದ್ರ ಸಿಂಗ್.
- **'ಭಾರತ ಸಮುದ್ರಯಾನ; ಪ್ರಗತಿಯ ಸಬಲೀಕರಣ'** ಧ್ಯೇಯದ, 63ನೇ ರಾಷ್ಟ್ರೀಯ ಸಮುದ್ರಯಾನ ದಿನಾಚರಣೆ, ಸಂಪನ್ನ.

- **ಹಾವೇರಿ ವಿಶ್ವವಿದ್ಯಾಲಯದ,** ಮೊದಲ ಘಟಿಕೋತ್ಸವ, ಇಂದು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>